# ಕರ್ನಾಟಕ ಸೆಂಟ್ರಲ್ ಕೋ–ಆಪ್‌ರೇಟಿವ್ ಬ್ಯಾಂಕ ಲಿ., ಧಾರವಾಡ
## ಇದರ ಆಡಳಿತ ಮಂಡಲಿಯ
## ನಿರ್ದೇಶಕರನ್ನು ಆಯ್ಕೆ ಮಾಡಲು ಚುನಾವಣೆ ನಡೆಸುವ ಸಲುವಾಗಿ ಕಾರ್ಯಕ್ರಮದ ವೇಳಾಪಟ್ಟಿ

**ನಮೂನೆ–XII**

(ನಿಯಮ 14 (3))

**ಚುನಾವಣಾ ನೋಟಿಸು**

ಕರ್ನಾಟಕ ಸೆಂಟ್ರಲ್ ಕೋ–ಆಪ್‌ರೇಟಿವ್ ಬ್ಯಾಂಕ ಲಿ., ಧಾರವಾಡ ಇದರ ಆಡಳಿತ ಮಂಡಲಿಯ ನಿರ್ದೇಶಕರ ಸ್ಥಾನಗಳಿಗೆ ಸನ್–2023ರ ಚುನಾವಣೆ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಸಾಮಾನ್ಯ ಚುನಾವಣೆ ಜರುಗಿಸಲು ಮಾನ್ಯ ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತರು ಇವರ ಆದೇಶ ಸಂಖ್ಯೆ:ಸಚುಪ್ರಾ/ಬೆ/ಬಾ.ಜಿ/28/2023-24/259/1 ದಿನಾಂಕ:12.06.2023 ನೇದ್ದರಂತೆ ರಿಟರ್ನಿಂಗ್ ಅಧಿಕಾರಿಯನ್ನು ನೇಮಿಸಿದ್ದು, ಅದರಂತೆ **ಅಶೋಕ ತೇಲಿ** ಕ.ಆ.ಸೇ., **ಉಪವಿಭಾಗಾಧಿಕಾರಿಗಳು, ಧಾರವಾಡ** ಆದ ನಾನು, ಸದರಿ ಬ್ಯಾಂಕಿನ ನಿರ್ದೇಶಕ ಮಂಡಲಿಯ ಸದಸ್ಯರುಗಳನ್ನು ಆಯ್ಕೆ ಮಾಡಲು ಚುನಾವಣೆಯನ್ನು **ದಿ:30-09-2023** ಶನಿವಾರ **ರಂದು ಬೆಳಿಗ್ಗೆ 9-00 ರಿಂದ ಸಂಜೆ 4.00 ಘಂಟೆಯವರೆಗೆ ಮೃತ್ಯುಂಜಯ ಪ್ರೌಢಶಾಲೆ ಮುರುಘಾಮಠ ಸವದತ್ತಿ ರೋಡ, ಧಾರವಾಡ ಶಾಲೆಯಲ್ಲಿ** ಜರುಗಿಸಲು ಈ ಮೂಲಕ ನೋಟೀಸು ನೀಡಿರುತ್ತೇನೆ.

ಚುನಾವಣಾ ವೇಳಾ ಪಟ್ಟಿಯು ಈ ಕೆಳಗಿನಂತೆ ಇರುತ್ತದೆ.

ಒಟ್ಟು ಚುನಾಯಿಸಬೇಕಾದ ಸದಸ್ಯರ ಸಂಖ್ಯೆ:– 20 ಈ ಪೈಕಿ..,

| ಕ್ರ.ಸಂ | ಆಯ್ಕೆ ಮಾಡಬೇಕಾದ ಕ್ಷೇತ್ರ | ಚುನಾಯಿಸಬೇಕಾದ ಪ್ರತಿನಿಧಿ ಸದಸ್ಯರ ಸಂಖ್ಯೆ |
|---|---|---|
| 1 | ಕಾರ್ಯವ್ಯಾಪ್ತಿಯಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪ್ರತಿನಿಧಿ ಪ್ರತಿ ತಾಲೂಕಿಗೆ ಒಬ್ಬರಂತೆ ತಾಲೂಕಿನ ಸಹಕಾರ ಸಂಘಗಳ ಮೂಲಕ ಆಯ್ಕೆ ಮಾಡುವುದು | 17 |
| 2 | ಕಾರ್ಯವ್ಯಾಪ್ತಿಯಲ್ಲಿರುವ ತಾಲೂಕ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳಿಂದ ಪ್ರತಿನಿಧಿ | 01 |
| 3 | ಕಾರ್ಯವ್ಯಾಪ್ತಿಯಲ್ಲಿ ಬರುವ ಪಟ್ಟಣ ಸಹಕಾರ ಬ್ಯಾಂಕು ಹಾಗೂ ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಪ್ರತಿನಿಧಿ | 01 |
| 4 | ಕಾರ್ಯವ್ಯಾಪ್ತಿಯಲ್ಲಿರುವ ಇತರೆ ಸಹಕಾರ ಸಂಘಗಳಿಂದ ಈ ಮೇಲೆ ತೋರಿಸಿದ 3 ವರ್ಗಗಳ ಸಂಘಗಳನ್ನು ಹೊರತುಪಡಿಸಿ ಪ್ರತಿನಿಧಿ | 01 |
| | ಒಟ್ಟು | 20 |

1),,...

## ಚುನಾವಣಾ ವೇಳಾಪಟ್ಟಿ

| ಅ.ನಂ | ಚುನಾವಣಾ ಕಾರ್ಯಸೂಚಿ | ದಿನಾಂಕ | ಸಮಯ | ಸ್ಥಳ |
|---|---|---|---|---|
| 1 | ಉಮೇದುವಾರನಾಗಿ ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ | 14-09-2023 ಗುರುವಾರ | ಮುಂಜಾನೆ 11 ಘಂಟೆಯಿಂದ ಮಧ್ಯಾಹ್ನ 3 ಘಂಟೆಯವರೆಗೆ | ಕೆ.ಸಿ.ಸಿ.ಬ್ಯಾಂಕ ಲಿ., ಧಾರವಾಡ ಕೇಂದ್ರ ಕಛೇರಿ,ಸುಭಾಸ ರಸ್ತೆ, ಧಾರವಾಡ. |
| 2 | ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ ನಿಯಮ 14(ಎ) | 22-09-2023 ಶುಕ್ರವಾರ | ಮುಂಜಾನೆ 11 ಘಂಟೆಯಿಂದ ಮಧ್ಯಾಹ್ನ 3 ಘಂಟೆಯವರೆಗೆ | ಕೆ.ಸಿ.ಸಿ.ಬ್ಯಾಂಕ ಲಿ., ಧಾರವಾಡ ಕೇಂದ್ರ ಕಛೇರಿ,ಸುಭಾಸ ರಸ್ತೆ, ಧಾರವಾಡ. |
| 3 | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ (ನಿಯಮ 14-ಬಿ ಪ್ರಕಾರ) | 23-09-2023 ಶನಿವಾರ | ಬೆಳಿಗ್ಗೆ 11.30 ಘಂಟೆಗೆ | ಕೆ.ಸಿ.ಸಿ.ಬ್ಯಾಂಕ ಲಿ., ಧಾರವಾಡ ಕೇಂದ್ರ ಕಛೇರಿ,ಸುಭಾಸ ರಸ್ತೆ, ಧಾರವಾಡ. |
| 4 | ರಿಟರ್ನಿಂಗ್ ಅಧಿಕಾರಿಯಿಂದ ಸಿಂಧುತ್ವ ಹೊಂದಿರುವ ನಾಮನಿರ್ದೇಶಿತ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ14-ಬಿ (4) ಪ್ರಕಾರ | 23-09-2023 ಶನಿವಾರ | ನಾಮಪತ್ರಗಳ ಪರಿಶೀಲನೆಯ ನಂತರ | ಕೆ.ಸಿ.ಸಿ.ಬ್ಯಾಂಕ ಲಿ., ಧಾರವಾಡ ಕೇಂದ್ರ ಕಛೇರಿ,ಸುಭಾಸ ರಸ್ತೆ, ಧಾರವಾಡ. |
| 5 | ಉಮೇದುವಾರರಿಂದ ನಾಮಪತ್ರಗಳನ್ನು ಹಿಂದಕ್ಕೆ ಪಡೆಯುವ ಕೊನೆಯ ದಿನಾಂಕ (ನಿಯಮ 14-ಸಿ ಪ್ರಕಾರ) | 24-09-2023 ರವಿವಾರ | ಬೆಳಿಗ್ಗೆ 11.00 ಘಂಟೆಯಿಂದ ಮಧ್ಯಾಹ್ನ 3.00 ಘಂಟೆಯವರೆಗೆ | ಕೆ.ಸಿ.ಸಿ.ಬ್ಯಾಂಕ ಲಿ.,ಧಾರವಾಡ ಕೇಂದ್ರ ಕಛೇರಿ,ಸುಭಾಸ ರಸ್ತೆ, ಧಾರವಾಡ. |
| 6 | ರಿಟರ್ನಿಂಗ್ ಅಧಿಕಾರಿಯಿಂದ ಸಿಂಧುತ್ವ ಹೊಂದಿರುವ ಉಮೇದುವಾರರ ಪಟ್ಟಿಯ ಪ್ರಕಟಣೆ (ನಿಯಮ 14-ಡಿ ರ ಪ್ರಕಾರ) | 24-09-2023 ರವಿವಾರ | ಮಧ್ಯಾಹ್ನ 3.00 ಘಂಟೆಯ ನಂತರ | ಕೆ.ಸಿ.ಸಿ.ಬ್ಯಾಂಕ ಲಿ.,ಧಾರವಾಡ ಕೇಂದ್ರ ಕಛೇರಿ,ಸುಭಾಸ ರಸ್ತೆ, ಧಾರವಾಡ. |
| 7 | ಅವಶ್ಯವಿದ್ದಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ ಉಮೇದುವಾರರಿಗೆ ಚಿಹ್ನೆಗಳನ್ನು ಹಂಚಿಕೆ ಮಾಡುವದು (ನಿಯಮ 14-ಇ ಪ್ರಕಾರ) | 24-09-2023 ರವಿವಾರ | ಮಧ್ಯಾಹ್ನ 3.00 ಘಂಟೆಯ ನಂತರ | ಕೆ.ಸಿ.ಸಿ.ಬ್ಯಾಂಕ ಲಿ.,ಧಾರವಾಡ ಕೇಂದ್ರ ಕಛೇರಿ,ಸುಭಾಸ ರಸ್ತೆ, ಧಾರವಾಡ. |
| 8 | ಸಿಂಧುತ್ವ ಹೊಂದಿರುವ ಉಮೇದುವಾರರ ಪಟ್ಟಿಯ ಚಿಹ್ನೆಯೊಂದಿಗೆ ಪ್ರಕಟಣೆ ನಿಯಮ 14-(ಇ) ಮತ್ತು 14(ಎಫ್) | 26-09-2023 ಮಂಗಳವಾರ | ಬೆಳಿಗ್ಗೆ 11.00 ಘಂಟೆಗೆ | ಕೆ.ಸಿ.ಸಿ.ಬ್ಯಾಂಕ ಲಿ.,ಧಾರವಾಡ ಕೇಂದ್ರ ಕಛೇರಿ,ಸುಭಾಸ ರಸ್ತೆ, ಧಾರವಾಡ. |
| 9 | ಮತದಾನ ನಡೆಯುವ ದಿನಾಂಕ ಮತ್ತು ಸಮಯ | 30-09-2023 ಶನಿವಾರ | ಬೆಳಿಗ್ಗೆ 9.00 ರಿಂದ ಸಾಯಂಕಾಲ 4.00 ಘಂಟೆಯವರೆಗೆ | ಮೃತ್ಯುಂಜಯ ಪ್ರೌಢಶಾಲೆ ಮುರುಘಾಮಠ ಧಾರವಾಡ ಶಾಲೆಯಲ್ಲಿ |
| 10 | ಮತಪತ್ರಗಳನ್ನು ಎಣಿಕೆ ಮಾಡುವದು | 30-09-2023 ಶನಿವಾರ | ಮತದಾನದ ಅವಧಿ ಮುಕ್ತಾಯವಾದ ನಂತರ | ಮೃತ್ಯುಂಜಯ ಪ್ರೌಢಶಾಲೆ ಮುರುಘಾಮಠ ಧಾರವಾಡ ಶಾಲೆಯಲ್ಲಿ |
| 11 | ರಿಟರ್ನಿಂಗ ಅಧಿಕಾರಿಯಿಂದ ಚುನಾವಣೆ ಫಲಿತಾಂಶ ಘೋಷಣೆ | 30-09-2023 ಶನಿವಾರ | ಮತ ಎಣಿಕೆ ಮುಕ್ತಾಯವಾದ ನಂತರ | ಮೃತ್ಯುಂಜಯ ಪ್ರೌಢಶಾಲೆ ಮುರುಘಾಮಠ ಧಾರವಾಡ ಶಾಲೆಯಲ್ಲಿ |

THE KARNATAK CENTRAL CO-OP BANK LTD. DHARWAD
C.No 1252
23-11-1916
RBI LSNo: RPCD (BG) DCCB 16.11-11
Dt. 12-12-2011

<u>ಸೂಚನೆಗಳು:-</u>

1) ಉಮೇದುವಾರರು ನಿಗದಿಪಡಿಸಿದ ನಮೂನೆ XIII ರಲ್ಲಿರುವ ನಾಮಪತ್ರವನ್ನು ಖುದ್ದಾಗಿ ರಿಟರ್ನಿಂಗ ಅಧಿಕಾರಿಗೆ /ಸಹಾಯಕ ರಿಟರ್ನಿಂಗ ಅಧಿಕಾರಿಗೆ ಸಲ್ಲಿಸತಕ್ಕದ್ದು.
2) ಉಮೇದುವಾರನು ತನ್ನ ನಾಮಪತ್ರವನ್ನು ನಿಗದಿಪಡಿಸಿದ ದಿನಾಂಕ ಮತ್ತು ಅವಧಿಯೊಳಗೆ ರಿಟರ್ನಿಂಗ ಅಧಿಕಾರಿಗೆ /ಸಹಾಯಕ ರಿಟರ್ನಿಂಗ ಅಧಿಕಾರಿಗೆ ಸಲ್ಲಿಸತಕ್ಕದ್ದು.
3) ಆಯಾ ಕ್ಷೇತ್ರದ ಅಭ್ಯರ್ಥಿಗೆ ಅದೇ ಕ್ಷೇತ್ರದ ಅರ್ಹಮತದಾರನು ಸೂಚಕನಾಗಿರತಕ್ಕದ್ದು.
4) ನಾಮಪತ್ರಕ್ಕೆ ಸೂಚಕರು ಹಾಗೂ ಉಮೇದುವಾರರು ಸಹಿ ಮಾಡಿರತಕ್ಕದ್ದು.
5) ಉಮೇದುವಾರರು ಒಂದು ಕ್ಷೇತ್ರಕ್ಕಿಂತ ಹೆಚ್ಚಿನ ಕ್ಷೇತಕ್ಕೆ ಸ್ಪರ್ಧಿಸುವಂತಿಲ್ಲ.
6) ಒಂದೇ ಮತಕ್ಷೇತ್ರದಿಂದ ಒಬ್ಬ ಸೂಚಕನು ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗೆ ಸೂಚಕನಾಗುವಂತಿಲ್ಲ.
7) ಅಭ್ಯರ್ಥಿಯು ತನ್ನ ನಾಮಪತ್ರ ಹಿಂತೆಗೆದುಕೊಳ್ಳಲು ಇಚ್ಛಿಸಿದಲ್ಲಿ ಲಿಖಿತ ನೋಟೀಸು ಮೂಲಕ ಅಂಥ ಅಭ್ಯರ್ಥಿಯೇ ಖುದ್ದಾಗಿ ರಿಟರ್ನಿಂಗ ಅಧಿಕಾರಿಗೆ/ಸಹಾಯಕ ರಿಟರ್ನಿಂಗ ಅಧಿಕಾರಿಗೆ ನೀಡುವ ಮೂಲಕ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಬಹುದು.
8) ಉಮೇದುವಾರರು ಕೆ.ಸಿ.ಸಿ.ಬ್ಯಾಂಕ ಕೇಂದ್ರ ಕಛೇರಿ ಧಾರವಾಡ ಶಾಖೆಯಲ್ಲಿ ರೂ.5,000/- ಚುನಾವಣಾ ಠೇವಣಿಯನ್ನು ಪಾವತಿಸಿದ ರಶೀದಿಯನ್ನು ನಾಮಪತ್ರದೊಂದಿಗೆ ಲಗತ್ತಿಸತಕ್ಕದ್ದು.
9) ಚುನಾವಣೆಯಲ್ಲಿ ಮತದಾನ ಮಾಡಲು ಕರ್ನಾಟಕ ಸಹಕಾರ ಸಂಘಗಳ ನಿಯಮ 1960 ರ ಪ್ರಕಾರ ಸಂಘದ ಗುರುತಿನ ಚೀಟಿ ಮತ್ತು ಆಡಳಿತ ಮಂಡಳಿ ಸಭೆಯಲ್ಲಿ ಪ್ರತಿನಿಧಿ ಅಂತಾ ಆಯ್ಕೆ ಆದ ದೃಢೀಕೃತ ಠರಾವು ಪ್ರತಿಯನ್ನು ಇತರ ಮಾಹಿತಿಯೊಂದಿಗೆ ಹಾಜರು ಪಡಿಸುವದು ಕಡ್ಡಾಯವಿರುತ್ತದೆ.
10) ಉಮೇದುವಾರನು ತಾನು ಪ್ರತಿನಿಧಿಸುವ ಸಹಕಾರ ಸಂಘದ ಆಡಳಿತ ಮಂಡಳಿಯ ಸದಸ್ಯನಾಗಿರತಕ್ಕದ್ದು ಹಾಗೂ ಆಡಳಿತ ಮಂಡಳಿ ಸಭೆಯಲ್ಲಿ ಪ್ರತಿನಿಧಿ ಅಂತಾ ಆಯ್ಕೆ ಮಾಡಲ್ಪಟ್ಟವನಾಗಿರಬೇಕು.
11) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ನಿಯಮಗಳು 1960 ಹಾಗೂ ಬ್ಯಾಂಕಿನ ಉಪನಿಯಮಗಳ ರೀತ್ಯಾ ಬ್ಯಾಂಕಿನ ನಿರ್ದೇಶಕರ ಮಂಡಳಿಗೆ ಆಯ್ಕೆ ಮಾಡಬೇಕಾಗುತ್ತದೆ.
12) ರಿಟರ್ನಿಂಗ ಅಧಿಕಾರಿಗಳ ಕೊಠಡಿಯಲ್ಲಿ ನಾಮಪತ್ರ ಸಲ್ಲಿಸಲು ಅಭ್ಯರ್ಥಿಯೊಂದಿಗೆ 4 ಜನರಿಗೆ ಮಾತ್ರ ಅವಕಾಶ ಇರುತ್ತದೆ.
13) ಚುನಾವಣೆಯ ಅವಧಿಯಲ್ಲಿ ಸಾರ್ವತ್ರಿಕ ರಜೆ ದಿನಗಳಲ್ಲಿಯೂ ಚುನಾವಣೆ ಕೆಲಸಕ್ಕಾಗಿ ಬ್ಯಾಂಕು ಕಾರ್ಯನಿರ್ವಹಿಸುತ್ತದೆ.
14) ಚುನಾವಣೆಗೆ ಸಂಬಂಧಿಸಿದ ನಾಮಪತ್ರ ಹಾಗೂ ಇತರೆ ನಮೂನೆಗಳು ಬ್ಯಾಂಕಿನ ಚುನಾವಣಾ ಕಚೇರಿಯಲ್ಲಿ ಲಭ್ಯವಿದ್ದು ನಿಗದಿತ ಫೀ ಭರಣಾ ಮಾಡಿ ಪಡೆಯಬಹುದಾಗಿದೆ.
15) ನಾಮಪತ್ರ ಪರಿಶೀಲನೆ ಸಮಯದಲ್ಲಿ ಅಭ್ಯರ್ಥಿಗಳು ಅಥವಾ ಅವರ ಸೂಚಕರು ಹಾಜರಿರಬಹುದು.
16) ಚುನಾವಣೆಯ ಚಿಹ್ನೆಗಳನ್ನು ಬ್ಯಾಂಕಿನ / ಶಾಖೆಯ ನೋಟೀಸ ಬೋರ್ಡಿನ ಮೇಲೆ ಪ್ರದರ್ಶಿಸಿದೆ.

( ಅಶೋಕ ತೇಲಿ ಕ.ಆ.ಸೇ.,)
**ರಿಟರ್ನಿಂಗ್ ಅಧಿಕಾರಿ,**
**ಕರ್ನಾಟಕ ಸೆಂಟ್ರಲ್ ಕೋ-ಆಪ್‌ರೇಟಿವ್ ಬ್ಯಾಂಕ ಲಿ., ಧಾರವಾಡ ಹಾಗೂ ಉಪವಿಭಾಗಾಧಿಕಾರಿಗಳು, ಧಾರವಾಡ ಉಪವಿಭಾಗ ,ಧಾರವಾಡ.**

**ಸ್ಥಳ :ಧಾರವಾಡ**
**ದಿ:19-08-2023.**

**ಗೆ,**
**ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು**
**________________________________**
**ಸಹಕಾರ ಸಂಘ ನಿ.,______________________________**
**ತಾ:** **ಜಿ:**